ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 7/6/2010

## ಪೈಲಟ್ ವಾಹನ ಹಿಂಬಾಲಿಸುವಿಕೆ, ಗಾರ್ಡ್ ಆಫ್ ಆನರ್ ರದ್ದುಪಡಿಸಿದ ಡಿಜಿಪಿ

# ಇನ್ನು ರಸ್ತೆಯಲ್ಲಿ ನಿಂತು ಸೆಲ್ಯೂಟ್ ಹೊಡಿಬೇಕಾಗಿಲ್ಲ

■ **ಮಂಜುನಾಥ್ ನಾಗಲೀಕರ್** ಬೆಂಗಳೂರು
manjunath.naglikar@timesgroup.com

ಡಿಜಿಪಿ ಜಿಲ್ಲಾ ಪ್ರವಾಸದ ವೇಳೆ ರಸ್ತೆ ಬದಿ ನಿಂತು ಸಲ್ಯೂಟ್ ಮಾಡುವುದು, ಒಂದಕ್ಕಿಂತ ಹೆಚ್ಚು ಪೈಲಟ್ ವಾಹನ ಹಿಂಬಾಲಿಸುವುದು ಮತ್ತು ಗಾರ್ಡ್ ಆಫ್ ಆನರ್ ಪದ್ಧತಿಗೆ ಡಿಜಿಪಿ ಪ್ರವೀಣ್ ಸೂದ್ ಇತಿಶ್ರೀ ಹಾಡಿದ್ದಾರೆ.

ಮಾನವ ಸಂಪನ್ಮೂಲದ ಸದ್ಬಳಕೆಯನ್ನು ಡಿಜಿಪಿಯವರು ಮನೆಯಿಂದಲೇ ಆರಂಭಿಸಿದ್ದಾರೆ. ಅಧಿಕೃತ ನಿವಾಸದ ಬಳಿ ಭದ್ರತೆ ಹಾಗೂ ಇತರ ಕರ್ತವ್ಯಕ್ಕೆ ಸಿಬ್ಬಂದಿ ಇರುತ್ತಿದ್ದರು. ಆದರೆ, ಅದರಲ್ಲಿ ತೀರಾ ಅಗತ್ಯ ಇರುವವನ್ನು ಮಾತ್ರ ಉಳಿಸಿಕೊಂಡು ಉಳಿದವರನ್ನು ವಾಪಸ್ ಮಾತೃ ವಿಭಾಗದಲ್ಲಿ ಕರ್ತವ್ಯಕ್ಕೆ ಕಳುಹಿಸಿದ್ದಾರೆ. ಪ್ರತಿದಿನ ಬೆಳಗ್ಗೆ ಪೊಲೀಸ್ ಮಹಾ ನಿರ್ದೇಶಕರು ಪ್ರಧಾನ ಕಚೇರಿ ಬಳಿ ಬಂದ ಕೂಡಲೇ ಹತ್ತಕ್ಕೂ ಹೆಚ್ಚು ಪೊಲೀಸರ ತಂಡ ಗಾರ್ಡ್ ಆಫ್ ಆನರ್ ನೀಡುತ್ತಿತ್ತು. ಇದನ್ನು ರದ್ದುಪಡಿಸಿದ್ದಾರೆ. ಇದಕ್ಕಾಗಿ ಅನಗತ್ಯವಾಗಿ ಸಿಬ್ಬಂದಿ ಮತ್ತು ಸಮಯ ವ್ಯರ್ಥ ಬೇಡ. ಅವರನ್ನು ಬೇರೆ ಕರ್ತವ್ಯಗಳಿಗೆ ಬಳಸುವಂತೆ ಸೂಚಿಸಿದ್ದಾರೆ.



ರಾಜ್ಯದ ಪೊಲೀಸ್ ಮುಖ್ಯಸ್ಥರು ಬರುತ್ತಾರೆ ಎಂದು ಅಕ್ಷರಶಃ ಗೃಹ ಸಚಿವರು, ಸಿಎಂ ಬಂದ ಸಂದರ್ಭದಲ್ಲೇ ಇರುವಷ್ಟೇ ವ್ಯವಸ್ಥೆಯನ್ನು ಜಿಲ್ಲೆ ನಗರಗಳಲ್ಲಿ ಮಾಡಲಾಗುತ್ತದೆ. ಒಂದರ ಹಿಂದೆ ಒಂದರಂತೆ ಕಾರು, ಜೀಪುಗಳು ಸಾಲಾಗಿ ತೆರಳುತ್ತವೆ. ದಾರಿಯುದಕ್ಕು ಪೊಲೀಸರು ಬಿಸಿಲು, ಗಾಳಿ, ಮಳೆ ಎನ್ನದೇ ಕಾದು ನಿಂತು ಸಲ್ಯೂಟ್ ಹೊಡೆಯುತ್ತಾರೆ. ಟ್ರಾಫಿಕ್ ಕ್ಲಿಯರ್ ಮಾಡುತ್ತಾರೆ. ಜಿಲ್ಲೆ ಭೇಟಿ ವೇಳೆ ಪ್ರಮುಖ ಕಚೇರಿಗಳಲ್ಲಿ ಗಾರ್ಡ್ ಆಫ್ ಆನರ್ ನೀಡಲಾಗುತ್ತದೆ. ಆದರೆ, ಈ ಪದ್ಧತಿಗಳು ಬೇಡ ಎಂದು ಸೂದ್ ತಮ್ಮ ಅಧೀನ ಅಧಿಕಾರಿಗಳಿಗೆ ತಿಳಿಸಿದ್ದಾರೆ.

**● ಅಧಿಕಾರಿಗಳು ತಮ್ಮ ಕೆಲಸದ ಮೇಲೆ ಗಮನ ಹರಿಸಿ ಮಾನವ ಸಂಪನ್ಮೂಲದ ಸದ್ಬಳಕೆ ಮಾಡಿಕೊಳ್ಳಬೇಕು. ನನ್ನ ವಾಹನದ ಹಿಂದೆ ಒಂದಕ್ಕಿಂತ ಹೆಚ್ಚು ಪೈಲಟ್ ವಾಹನ ಸಂಚರಿಸುವುದು ಅಧಿಕಾರದ ಅತ್ಯಂತ ಕೆಟ್ಟ ಪ್ರದರ್ಶನ ಹಾಗೂ ಮುಜುಗರದ ವಿಷಯವಾಗಿದೆ.**

**- ಪ್ರವೀಣ್ ಸೂದ್**
ಡಿಜಿಪಿ